ಸೇರಿಕೊಂಡಿರುವುದರಿಂದ ಅಂಥ ಹಳ್ಳಿಗಳಿಗೂ ಈ ಕಾನೂನು ಜಾರಿಗೊಳಿಸಿದರೆ, ಅವರಿಗೆ ಅನ್ಯಾಯವಾಗುತ್ತದೆ ಅದರ ಬಗ್ಗೆ ಸರ್ಕಾರ ಏನು ಹೇಳುತ್ತದೆಂದು ತಮ್ಮ ಮೂಲಕ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- 1975ರಲ್ಲಿ ಕರ್ನಾಟಕ ನೀರು ಸರಬರಾಜು ಇಲಾಖೆ ಈ ರಾಜ್ಯದಲ್ಲಿ ಬಂದಿದ್ದು, ಇದುವರೆಗೂ ಮೂರನೆಯ ಒಂದು ಭಾಗ ಜನಕ್ಕೆ, ಅಂದರೆ ಒಂದು ಕೋಟಿ 10 ಲಕ್ಷ ಜನರಿಗೆ ನೀರನ್ನು ಒದಗಿಸುವಂಥ ಕಾರ್ಯವನ್ನು ಮಾಡಿದ್ದೇವೆ. 235 ಪಟ್ಟಣ ಪ್ರದೇಶಗಳಿಗೆ ನೀರನ್ನು ಒದಗಿಸುತ್ತಿದ್ದೇವೆ. ಇದುವರೆಗೂ ನಾವು ಖರ್ಚುಮಾಡಿರುವಂಥ ಹಣ 355 ಕೋಟಿ ರೂಪಾಯಿ. ಇಡೀ ಕಾವೇರಿ ವ್ಯಾಪ್ತಿಯಲ್ಲಿ 40 ಲಕ್ಷ ಜನಸಂಖ್ಯೆ ಇರುವಂಥ ಪಟ್ಟಣಕ್ಕೆ 1ನೇ ಹಂತ, 2ನೇ ಹಂತ, 3ನೇ ಹಂತ ಮತ್ತು 4ನೇ ಹಂತ ಎಂದು 1200 ಕೋಟಿ ರೂಪಾಯಿಗಳನ್ನು 4ನೇ ಹಂತಕ್ಕೆ ನಾವು ಖರ್ಚುಮಾಡುತ್ತಿದ್ದೇವೆ. ಪಟ್ಟಣಗಳು ಜಾಸ್ತಿಯಾಗುತ್ತಾ ಇವೆ, ಇದರ ಜೊತೆಗೆ, ಪುರಸಭೆಯ ಲಿಮಿಟೇಷನ್ ವಿಸ್ತರಣೆಯಾಗುತ್ತಾ ಇದೆ. ಈ ಯೋಜನೆಗಳನ್ನು ಹಂತ ಹಂತವಾಗಿ, ಆಗ್ಮಂಟೇಷನ್ ಹೊಸದಾಗಿ ಇಂಪ್ರೂವ್‌ಮೆಂಟ್, ಅಭಿವೃದ್ಧಿ ಮಾಡುವುದು ಮತ್ತು ಪೈಪ್‌ಲೈನ್ ಅಳವಡಿಸುವಂಥಾದ್ದು, ಡಿಸ್ಟ್ರಿಬ್ಯೂಷನ್ ಸಿಸ್ಟಂ ಅಡಿಷನಲ್ ವಾಟರ್ ಸಪ್ಲೈ, ಸರ್ಫೇಸ್ ವಾಟರ್ ತೆಗೆದುಕೊಳ್ಳುವಂತಾದ್ದು, ಬೋರ್‌ವೆಲ್ಸ್, ಪವರ್ ಪಂಪ್ಸ್, ಇವೆಲ್ಲಾ ಬೇಕಾದಷ್ಟು ಕಾರ್ಯಗಳು ಇವೆ. ಇವೆಲ್ಲಾ ತೆಗೆದುಕೊಂಡು, ತಾವು ಹೇಳಿದ ಹಾಗೆ ಆದ್ಯತೆ ಮೇಲೆ ಆ ಕಾರ್ಯವನ್ನು ಮಾಡುತ್ತೇವೆ. ಗ್ರಾಮಾಂತರ ಪ್ರದೇಶದ್ದು ಜಿಲ್ಲಾ ಪರಿಷತ್ತಿಗೆ ಬರುತ್ತದೆ. ಪಟ್ಟಣ ಪ್ರದೇಶಗಳು ನನಗೆ ಬರುತ್ತದೆ.

ವಿಷಯ:- ಮೈಸೂರು ನಗರದ ಕೆ.ಆರ್.ವೃತ್ತದಲ್ಲಿ ಕುಡಿಯುವ ನೀರಿನ ಕೊಳವೆ ಜೋಡಣೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 67 (518)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ನಗರದ ಕೆ.ಆರ್.ವೃತ್ತದ ಕುಡಿಯುವ ನೀರಿನ ಕೊಳವೆ ಜೋಡಣೆ ಕಾರ್ಯವನ್ನು ಯಾವಾಗ ಪ್ರಾರಂಭಿಸುತ್ತೀರಿ?

ಆ) ಸಿದ್ಧಾರ್ಥ ಬಡಾವಣೆ ಯರಗನಹಳ್ಳಿ ನೀರಿನ ಸಂಪು ನಿರ್ಮಾಣ ಕೆಲಸ ನಿಧಾನವಾಗಿ ನಿರ್ಮಾಣವಾಗುತ್ತಿದ್ದು ಮೈಸೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಅತಿ ಹೆಚ್ಚಾಗಿದ್ದು ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಈ ಕೆಲಸವನ್ನು 1996ರ ಆಗಸ್ಟ್ ತಿಂಗಳಲ್ಲಿ ಪ್ರಾರಂಭಿಸಲಾಗುವುದು.

ಆ) ಯರಗನಹಳ್ಳಿ ಸಿದ್ಧಾರ್ಥ ನಗರ ಜಲಸಂಗ್ರಹಾಗಾರದ ಬಾಕಿ ಕೆಲಸಗಳನ್ನು ಈಗಾಗಲೇ ಶ್ರೀರಾಮಯ್ಯ ಮತ್ತು ಕಂಪನಿ, ಮೈಸೂರು ಇವರಿಗೆ ವಹಿಸಿದ್ದು ಈ ಕೆಲಸವು ಅತ್ಯಂತ ತೀವ್ರಗತಿಯಲ್ಲಿ ಪ್ರಗತಿಯಲ್ಲಿದೆ. ಈ ಜಲಸಂಗ್ರಹಾಗಾರವನ್ನು 1996ರ ಡಿಸೆಂಬರ್ ವೇಳೆಗೆ ಪೂರ್ಣಗೊಳಿಸಲಾಗುವುದು.

ಶ್ರೀ ಇ.ಮಾರುತಿರಾವ್ ಪವಾರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರ ಬಹಳ ಸಮಂಜಸವಾಗಿದೆ ಹಿಂದೆ ಇದ್ದಂಥ ಸಚಿವರಿಗೆ ಈ ಪ್ರಶ್ನೆಯನ್ನು ಕೇಳಿದಾಗ, ಮಾರ್ಚ್, ಏಪ್ರಿಲ್ ಒಳಗಾಗಿ ಈ ಕೆಲಸವನ್ನು ಸಂಪೂರ್ಣವಾಗಿ ಮಾಡಿ, ಪೂರೈಸಿ, ಈ ನೀರಿನ ಅನುಕೂಲವನ್ನು ಮಾಡಿಕೊಡುತ್ತೇವೆಂಬ ಮಾತನ್ನು ಹೇಳಿದ್ದರು. ಈಗಿರತಕ್ಕಂಥ ಸಚಿವರೂ ಸಹ ಬರುವ ತಿಂಗಳಲ್ಲಿ ಕೆ.ಆರ್.ಸರ್ಕಲ್‌ನಲ್ಲಿರುವಂಥ ಕೊಳವೆಯನ್ನು ಅಳವಡಿಸುತ್ತೇವೆಂದು ಹೇಳಿದ್ದಾರೆ. ಹಾಗೆಯೇ ಯರಗನಹಳ್ಳಿಯಲ್ಲಿರತಕ್ಕ ಒಂದು ಸಂಪನ್ನೂ ಸಹ ಈ ವರ್ಷದೊಳಗಾಗಿ ಮಾಡುತ್ತೇವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಅವರು ಉತ್ತರ ಏನು ಕೊಟ್ಟಿದ್ದಾರೆ, ಅದರ ಪ್ರಕಾರ ಕೆಲಸ ಪೂರೈಸಿದಲ್ಲಿ ನಜರ್‌ಬಾದ್ ಇಟ್ಟಿಗೆಗೂಡು, ಸಿದ್ಧಾರ್ಥ ಬಡಾವಣೆ, ಕ್ಯಾತಮಾರನಹಳ್ಳಿ, ಉದಯಗಿರಿ, ಈ ರೀತಿಯಾದ ಬಡಾವಣೆಗಳಲ್ಲಿ ಈ ಕಾವೇರಿ ಕುಡಿಯುವ ನೀರಿನ ವ್ಯವಸ್ಥೆಗೆ ಅನುಕೂಲವಾಗುತ್ತದೆ. ಅವರೇನು ಉತ್ತರ ಕೊಟ್ಟಿದ್ದಾರೆ, ಅದರ ಪ್ರಕಾರ ಕೆಲಸ ಪೂರೈಸಿದರೆ, ಸಂಬಂಧಪಟ್ಟ ಬಡಾವಣೆಗಳಿಗೆ ಅನುಕೂಲವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಏಕೆಂದರೆ, ಈಗ ಆರೂವರೆ ಕೋಟಿ ರೂಪಾಯಿಗಳ ಯೋಜನೆ, ಮೈಸೂರು ನಗರಕ್ಕೆ ಹೆಚ್ಚಿನ ನೀರನ್ನು ತರುವಂಥ ಕಾವೇರಿ ಯೋಜನೆಯ ಹಿನ್ನೆಲೆಯಲ್ಲಿ ಈಗಾಗಲೇ 6-7 ವರ್ಷಗಳ ಹಿಂದೆ ಕೆಲಸ ಪ್ರಾರಂಭವಾಗಿದ್ದರೂ ಸಹ ಇಲ್ಲಿಯವರೆಗೂ ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಆರೂವರೆ ಕೋಟಿ ರೂಪಾಯಿಗಳ ಪ್ರಾರಂಭವಾದ ಯೋಜನಾ ಕೆಲಸ ಇವತ್ತು ಹನ್ನೊಂದುವರೆ ಕೋಟಿ ರೂಪಾಯಿಗಳಾಗಿದೆ. ಈ ರೀತಿಯಾಗಿ ವಿಳಂಬವಾದರೆ, ಜನಗಳಿಗೆ ಅನುಕೂಲವಾಗುವುದಿಲ್ಲ ಮತ್ತು ತೊಂದರೆಯೂ ಆಗುತ್ತದೆ. ಮತ್ತು ಅದರ ವೆಚ್ಚವೂ ಜಾಸ್ತಿಯಾಗುತ್ತದೆ. ದಯಮಾಡಿ, ತಾವು ಉತ್ತರ ಕೊಟ್ಟಿರುವ ಪ್ರಕಾರ, ತಕ್ಷಣದಲ್ಲಿ ಕೆಲಸವನ್ನು ಪೂರೈಸಬೇಕೆಂಬ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಸಾಧ್ಯವಾದರೆ ಅಷ್ಟರೊಳಗಾಗಿ ಮುಗಿಸಿ, ಎಲ್ಲಾ ಕಾರ್ಯವನ್ನು ಮಾಡುತ್ತೇವೆ. ಡಿಸೆಂಬರ್‌ನೊಳಗಾಗಿ ಎಲ್ಲಾ ಮುಗಿಸಿಕೊಡುತ್ತೇವೆ, ಅಕ್ಟೋಬರ್ ಒಳಗಾಗಿ ಆ ಪೈಪನ್ನು ಅಳವಡಿಸುತ್ತೇವೆ. ಕಾರಣ, ಆ ಸಯ್ಯಾಜಿರಾವ್ ರಸ್ತೆಯಲ್ಲಿ 750 ಮಿಲಿಮೀಟರ್ ಟ್ರಾಫಿಕ್ ಜಾಸ್ತಿ ಇರುವುದರಿಂದ ಮೆದು ಲೋಹದ ಕೊಳವೆಯನ್ನು ಹಾಕಬೇಕಾಗುತ್ತದೆ. ಕೇವಲ ಇನ್ನು 290 ಮಿಲಿಮೀಟರ್ ಮಾತ್ರ ಉಳಿದಿರತಕ್ಕಂಥಾದ್ದು. ಅದಕ್ಕೆ ಈಗಾಗಲೇ ಟೆಂಡರ್ ಕರೆದು ಅದನ್ನು ಮುಗಿಸಬೇಕೆಂದು ಮಾಡಿದ್ದೇವೆ. ಎರಡು ಜಿ.ಎಲ್.ಎಸ್. ಜಲಸಂಗ್ರಹ ಮಾಡುವಂಥ, ಹನ್ನೊಂದುವರೆ ಲಕ್ಷ ಲೀಟರನ್ನು ಜಲ ಸಂಗ್ರಹ ಮಾಡುವಂಥ ಗ್ರೌಂಡ್‌ಲೆವಲ್ ರಿಸರ್‌ವಾಯರ್

ಅದರ ಕಾರ್ಯವನ್ನು ಬೇರೆಯವರಿಗೆ ಒಪ್ಪಿಸಿದ್ದೇವೆ; ಅವನು ಮೆಸರ್ಸ್ ರಾಮಯ್ಯ ಎಂದು. ಡಿಸೆಂಬರ್‌ಗೆ ಮುಗಿಸಿ, ಡಿಸೆಂಬರ್ ಒಳಗಾಗಿ ಎಲ್ಲಾ ಕಾರ್ಯವನ್ನು ಮಾಡಿ, ನೀರನ್ನು ಒದಗಿಸುವಂಥ ತಮ್ಮ ಆಸೆ ಏನಿದೆ, ಕಾರ್ಯವನ್ನು ಮಾಡುತ್ತೇವೆ.

ವಿಷಯ:- ಬಡ ನೇಕಾರರಿಗೆ ಮನೆಗಳು ಮತ್ತು ಕಾರ್ಯಗಾರಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 68 (289)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಬಡ ನೇಕಾರರಿಗೆ ಮನೆಗಳನ್ನು ಹಾಗೂ ಕಾರ್ಯಾಗಾರಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿತ್ತು. (ಜಿಲ್ಲಾವಾರು ವಿವರ ನೀಡುವುದು)

ಆ) ಈ ಯೋಜನೆಗೆ ನಿಗದಿ ಪಡಿಸಿದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) 31.3.1996ರೊಳಗೆ ಸಾಧಿಸಿದ ಪ್ರಗತಿ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು):-

ಅ) 1516.

ಜಿಲ್ಲಾವಾರು ಕಾರ್ಯಾಗಾರ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ:

ಜಿಲ್ಲೆ	ಕಾರ್ಯಾಗಾರ ಸಂಖ್ಯೆ
1) ಬೆಳಗಾವಿ	109
2) ಚಿತ್ರದುರ್ಗ	735
3) ತುಮಕೂರು	396
4) ಕೋಲಾರ	80
5) ಶಿವಮೊಗ್ಗ	58
6) ಹಾಸನ	26
7) ಗುಲ್ಬರ್ಗ	39
8) ಬಿಜಾಪುರ	50
9) ಮಂಡ್ಯ	23
	1516